ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ

ದಿನಾಂಕಃ **24.01.2026**

**ಮುಂದುವರೆದ ಪಾಟೀ ಸವಾಲುಃ 1 ನೇ ವಾದಿ ಪರ ಶ್ರೀ ಕೆ ಎಸ್ ಡಿ ವಕೀಲರಿಂದ**

ದಿಃ 0310.1974 ರಲ್ಲಿ ಆದ ವಿಭಾಗ ಪತ್ರ ಲಿಂಗರಾಜಯ್ಯ ಮತ್ತು ಲಕ್ಕಪ್ಪಪರವರ ಮದ್ಯೆ ಮಾತ್ರ ಆಗಿರುತ್ತದೆ ಎಂದರೆ ಸರಿ . ಅವರವರ ಪಾಲಿಗೆ ಬಂದ ಆಸ್ತಿಯನ್ನು ಅವರ ಅವರ ವಾರಸುದಾರರು ಅನುಭಾವಿಸುತ್ತಾ ಬಂದರು ಎಂದರೆ ಸರಿ. ದಿಃ 06.01.1981 ರಲ್ಲಿ ಲಕ್ಕಪ್ಪರವರ ಸೊಸೆ ಜಯಮ್ಮರವರಿಗೆ ಲಿಂಗರಾಜಯ್ಯ ಮತ್ತು ನಮ್ಮ ತಂದೆ ನಾರಾಯಣ ಮಾರಟ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಕನ್ನಡ ಓದಲು ಬರೆಯಲು ಬರುತ್ತದೆ. **ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲಾತಿಯನ್ನು ತೋರಿಲಸಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಿಪಿ 18 ಎಂದು ಗುರುತಿಸಲಾಯಿತು**. ಸದರಿ ನಿಪಿ 18 ರಂತೆ ಲಕ್ಕಪ್ಪರವರ ಸೊಸೆಯಾದ ಜಯಮ್ಮರವರಿಗೆ ನನ್ನ ತಾತ ಲಿಂಗರಾಜಯ್ಯ ಮತ್ತು ನನ್ನ ತಂದೆ ನಾರಾಯಣ ರವರು ಬರೆದುಕೊಟ್ಟ ಕ್ರಯ ಪತ್ರ ಎಂದರೆ ಇರಬಹುದು . ನಿಪಿ 18 ರಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ನಮ್ಮ ದರದ್ದು ನಿಮಿತ್ತ ಮಾರಾಟ ಮಾಡಲಾಗಿದೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ನಿಪಿ 18 ರಲ್ಲಿ ಖುಷ್ಕಿ ಸರ್ವೆ ನಂ 118 /1 ರಲ್ಲಿ 1 ಎಕರೆ 18 ಸೆಂಟ್ಸ , ಸರ್ವೆ ನಂ 112 ರಲ್ಲಿ 1 ಎಕರೆ 66 ಸೆಂಟ್ಸ ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿ ಪ್ರಕಾರ ಇರಬಹುದು ಎಂದು ನಾನು ಹೇಳಬಹುದು ಎಂದು ನುಡಿದರು . ಮರಿಯಪ್ಪ ರವರಿಗೆ ಮೂರು ಮಕ್ಕಳು ಇದ್ದು ,

ಒಬ್ಬರು ಲಿಂಗರಾಜಯ್ಯ ಮತ್ತು ಲಕ್ಕಪ್ಪ , ಇನ್ನೊಬ್ಬ ಮಗಳು ನಿಂಗಮ್ಮ ಎಂದರೆ ಸಾಕ್ಷಿಯು ನಿಂಗಮ್ಮ ಅಲ್ಲ ಅವರು ತಿಮ್ಮಮ್ಮ ಎಂದು ನುಡಿದರು. ಸದರಿ ನಿಂಗಮ್ಮ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ನಿಂಗಮ್ಮ ಎಂಬುವವರು ನನಗೆ ಗೊತ್ತಿಲ್ಲ. ತಿಮ್ಮಮ್ಮರವರಿಗೆ ಮಕ್ಕಳು ಇರಲಿಲ್ಲ ಎಂದು ನುಡಿದರು. ನಿಂಗಮ್ಮ ರವರ ಹೆಸರು ತಿಮ್ಮಮ್ಮ ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೇ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿದರು. 1956 ನೆ ಇಸವಿಯಲ್ಲಿ ಮರಿಯಪ್ಪ ಕುಟುಂಬದ ಆಸ್ತಿಗಳು ಲಿಂಗರಾಜಯ್ಯ ರವರ ಹೆಸರಿನಲ್ಲಿ ಇದ್ದವು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದರು. 1956-57 ನೆ ಸಾಲಿನವರೆಗೂ ಇದ್ದಾತಂತಹ ಪಿತ್ರಾರ್ಜಿತ ಆಸ್ತಿಗಳಲ್ಲಿ 1958 ರಲ್ಲಿ ಸುಬ್ಬರಾಜೆ ಅರಸ್ ಕುಟುಂಬಂದ ನಾರಾಯಣ ರಾವ್ , ಶೇಷಾರಾವ್ , ಹನುಮಂತ ರಾವ್ , ಸರಸು ಬಾಯಿ ,ಪದ್ಮಾಬಾಯಿರವರುಗಳಿಗೆ ಸೇರಿದಂತಹ ಸರ್ವೆ ನಂ 2/18, 23/6, 2/25, 2/26 ಸ್ವತ್ತುಗಳನ್ನು ವರ್ಗಾವರ್ಗಿ ಮೂಲಕ ಲಿಂಗರಾಜಯ್ಯರವರಿಗೆ ಸರ್ವೆ ನಂ 2/34 10 ಎಕರೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ 4 ನ್ನು ತೋರಿಸಲಾಗಿ ಸದರಿ ಪತ್ರದ ಮುಖಾಂತರ ಸುಬ್ಬರಾಜೆ ಅರಸ್ ಮತ್ತು ಲಿಂಗರಾಜಯ್ಯರವರ ಮದ್ಯೆ ವರ್ಗಾವರ್ಗಿಯಾಗಿದೆ ಎಂದರೆ ಸರಿ . ಈ ರೀತಿ ವರ್ಗಾವರ್ಗಿಯಾದ ಆಸ್ತಿಯನ್ನು ಲಿಂಗರಾಜಯ್ಯ ಮತ್ತು ಲಕ್ಕಪ್ಪರವರು ಒಟ್ಟಾಗಿ ಅನುಭವಿಸಿಕೊಂಡು ಬಂದರು ಎಂದರೆ ಸುಳ್ಳು . ವರ್ಗಾವರ್ಗಿಯಾಗಿ ಬಂದ ಆಸ್ತಿ ಮತ್ತು ಈ ಹಿಂದೆ ತಿಳಿಸಿದ ಎಲ್ಲಾ ಸ್ವತ್ತುಗಳನ್ನು ಲಿಂಗರಾಜಯ್ಯ ಮತ್ತು ಲಕ್ಕಪ್ಪ ರವರು 1974 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ

ಎಂದರೆ ಸರಿ . ಈ ರೀತಿ ವಿಬಾಗ ಆದ ಆಸ್ತಿಗಳು ಅವ ರ ಅವರಿಗೆ ಬಂದ ಆಸ್ತಿ ಅವರವರುಗಳ ಹೆಸರಿನಲ್ಲಿ 2008–09 ನೆ ಸಾಲಿನವರೆಗೂ ಖಾತೆ ಬಂದಿರುತ್ತದೆ ಎಂದರೆ ಸುಳ್ಳು . 2009–10 ನೆ ಸಾಲಿನಲ್ಲಿ ದಾವಾಸ್ವತ್ತುಗಳು ಒಂದನೇ ಪ್ರತಿವಾದಿ ನಾರಾಯಣರಾವ್ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೌತಿ ಖಾತೆಯಾಗಿರುತ್ತದೆ ಆದರೆ 1976 ರಿಂದ 2010 ರವರೆಗೂ ಜಂಟಿ ಖಾತೆಯಲ್ಲಿ ಇರುತ್ತದೆ ಎಂದು ನುಡಿದರು.

ಜಂಟಿ ಖಾತೆ ಇದೆ ಎಂದು ಆರ್ ಟಿ ಸಿ ಆದಾರದ ಮೇಲೆ ಹೇಳಿರುತ್ತೇನೆ. ಸದರಿ ಆರ್ ಟಿ ಸಿ ಗಳನ್ನು ನಾನು ನೋಡಿರುತ್ತೇನೆ. ಆರ್ ಟಿ ಸಿ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ಅಶೋಕರವರಿಗೆ 2013–14 ರಪೂರ್ವದಲ್ಲಿ ಅಪಘಾತವಾಗಿ ಪೆಟ್ಟಾಗಿತ್ತು ಎಂದರೆ ಸರಿ . ಅಶೋಕರವರು ಅಪಘಾತದಿಂದ ಮಾನಸಿಕ ಸ್ತಿಮತೆಯನ್ನು ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ. ಅಪಘಾತದಿಂದ ಆದ ಪೆಟ್ಟಿಗೆ ಅಶೋಕರವರು ಸುಮಾರು 3 ತಿಂಗಳ ಕಾಲ ವಿಮ್ಮಾನ್ಸ ನಲ್ಲಿ ,ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದಿನಿಂದ ಅಶೋಕರವರ ಎಡಭಾಗದ ಶರೀರ ಸಂಪೂರ್ಣ ಸ್ವಾಧಿನ ಅನುಭವ ಕಳೆದುಕೊಂಡಿತ್ತು ಎಂದರೆ ಸಾಕ್ಷಿಯು ವೈದ್ಯಾದಿಕಾರಿಗಳ ಸರ್ಟಿಫಿಕೇಟ ಪ್ರಕಾರ 30 ಪರಸೆಂಟ್ ಮಾತ್ರ ಸ್ವಾದೀನತೆ ಕಳೆದುಕೊಂಡಿತ್ತು ಎಂದು ನುಡಿದರು. ಅಪಘಾತವಾದ್ದರಿಂದ ಸ್ವಾದೀನತೆ ಕಳೆದುಕೊಂಡಿದ್ದು ಆ ಕಾರಣದಿಂದ ಅವರು ಮರಣ ಹೊಂದಿರುತ್ತಾರೆ ಎಂದರೆ ಸುಳ್ಳು . ನಾನು ದಿಃ 02.01.2019 ರಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ನನ್ನ

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಸಹಿ ಹಾಕಿರುತ್ತೇನೆ ಎಂದರೆ ಸರಿ .

ಪ್ರಮಾಣ ಪತ್ರವನ್ನು ಸಲ್ಲಿಸುವ ಸಮಯದಲ್ಲಿ ಓದಿ ತಿಳಿದುಕೊಂಡೆ ಸಹಿ ಹಾಕಿರುತ್ತೇನೆ ಎಂದರೆ ಸರಿ . ಪ್ರಮಾಣ ಪತ್ರದ 2 ನೇ ಖಂಡಿಕೆಯಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಮತ್ತು 1 ನೇ ಪ್ರತಿವಾದಿಗೆ ವಾದ ಪತ್ರದಲ್ಲಿ ವಿವರಿಸಿದಂತೆ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ . ಅದೆ ರೀತಿ ಮುಂದುವರೆದು 2 ನೇ ಖಂಡಿಕೆಯಲ್ಲಿ 2009-10 ರ ನಂತರ 1 ನೇ ಪ್ರತಿವಾದಿ ಹೆಸರಿನಲ್ಲಿ ಪೌತಿ ಮೇಲೆ ಖಾತೆ ಮೇಲೆ ಬರೆಯಲಾಗಿರುತ್ತದೆ ಎಂದರೆ ಸರಿ . ಮುಂದುವರೆದು ಲಿಂಗರಾಜಯ್ಯ ಮತ್ತು ಅವರ ಸಹೋದರರು 1974 ರಲ್ಲಿ ಮಾಡಿಕೊಂಡ ವಿಬಾಗದಂತೆ ಬಂದ ಸ್ವತ್ತು ಆಗಿರುತ್ತದೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . ದಿಃ 02.01.2019 ರಲ್ಲಿ ಪ್ರಮಾಣ ಪತ್ರ ಸಲ್ಲಿಸಿದ ಮೇರೆಗೆ ಅಡ್ಡ ವಿಚಾರಣೆಯನ್ನು ನುಡಿದಿರುತ್ತೇನೆ ಎಂದರೆ ಸರಿ . ಸರ್ವೆ ನಂ 2/34ಪಿ1 ರಲ್ಲಿ ಬೆಳೆದಿದ್ದ ಬೆಳೆಯನ್ನು ನನ್ನ ತಂದೆ ನಮಗೆ ನೀಡುತ್ತಿರಲಿಲ್ಲ ಎಂದು ನುಡಿದಿರುತ್ತೇನೆ ಎಂದರೆ ಸುಳ್ಳು . ನಾನು ಸದರಿ ದಿನ ನ್ಯಾಯಾಲಯದ ಮುಂದೆ ನುಡಿದಿದ್ದ ಸಾಕ್ಷ್ಯ ತಪ್ಪು ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು ಸಂಪೂರ್ಣವಾಗಿ ವಾಕ್ಯವನ್ನು ಹೇಳಿದರೆ ಅರ್ಥವಾಗುತ್ತದೆ ಎಂದು ನುಡಿದರು.

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ಮತ್ತು ಸಂದರ್ಬದಲ್ಲಿ ಮತ್ತು ನನ್ನ ಕಾನೂನಿನ ತಿಳುವಳಿಕೆ ಪ್ರಕಾರ ಆ ದಿನದ ಮಟ್ಟಿಗೆ ಪಿತ್ರಾರ್ಜಿತ ಆಸ್ತಿ ಎಂದು ತಿಳಿಸಿರುವುದು ಸತ್ಯವಾಗಿರುತ್ತದೆ. ಆ ದಿನವೂ ಪಿತ್ರಾರ್ಜಿತ ಆಸ್ತಿ ಎಂದು ಗೊತ್ತಿತ್ತು ಮತ್ತು ಈ ದಿನವು ಪಿತ್ರಾರ್ಜಿತ ಆಸ್ತಿಯಾಗಿದ್ದರೂ ದಾನ ಪತ್ರ

ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಅಧಿಕಾರಿ ಗಳ ಜೊತೆ ಶಾಮೀಲು ಆಗಿ ದಾನ ಪತ್ರದ ಆದಾರದ ಮೇಲೆ ಕೆಲವು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸುಳ್ಳು . ಸಾಕ್ಷಿಯು ಮುಂದುವರೆದು ಪಂಚಾಯಿತಿ ಅಧಿಕಾರಿಗಳ ಆದೇಶದ ಮೇರೆಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದು ನುಡಿದರು. ನಾನು ಮತ್ತು ಶೈಲೇಶ್ ಚಂದ್ರ ರವರು ಶಶಿಕಲಾರವರ ಸಹಿಯನ್ನು ನಕಲು ಮಾಡಿರುತ್ತೇವೆ ಎಂದರೆ ಸುಳ್ಳು . ಈ ರೀತಿ ನಕಲು ಮಾಡಿದ್ದರಿಂದ ಕುಶಾಲನಗರ ನ್ಯಾಯಾಲಯದಲ್ಲಿ ಸಿಸಿ ನಂ 500/2025 ರಂತೆ ನನ್ನ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದು ಅದರ ಬಗ್ಗೆ ನಾನು ಹೇಳಲು ಇಷ್ಟ ಪಡುವುದಿಲ್ಲ ಎಂದು ನುಡಿದರು. ಶಶಿಕಲಾ ರವರ ಸಹಿ ಮಾಡದೆ ಇರುವುದು ಗೊತ್ತಿದ್ದರೂ ಅವರ ಸಹಿಯನ್ನು ನಕಲು ಮಾಡಿ ಈ ದಾವೆಯನ್ನು ಸಲ್ಲಿಸಿ ಅವರಿಗೆ ಗೊತ್ತಾದ ನಂತರ ಅವರ ವಿರುದ್ದ ಮತ್ತು ದಾವಾ ವಸ್ತು ಸ್ಥಿತಿಯ ವಿರುದ್ದ ವಾಗಿ ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸುಳ್ಳು. ದಾವಾಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು ಶಶಿಕಲಾರವರಿಗೆ ಆಸ್ತಿ ಬರುವುದು ತಪ್ಪಿಸಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.